ಯಲ್ಲ ಮಾಲುಗಳನ್ನೇ ಆಗಲಿ ಅಥವಾ ಅವುಗಳಲ್ಲಿ ಯಾವದನ್ನೇ ಆಗಲಿ ಪತ್ತೇಮಾಡಿ ಕೊಟ್ಟವರಿಗೆ ಪತ್ತೇಆದ ಮೂಲಿನ ಕಿಮ್ಮತ್ತಿನಲ್ಲಿ ಶೇಕಡಾ 10 ರೂಪಾಯಿನಂತೆ ಇನಾಂ ಕೊಡುವದಾಗಿ ಮೂಲೀಕರು ಕಬೂಲಿದ್ದಾರೆ.

ಪಿ. ಎಸ್. ಕೃಷ್ಣಮೂರ್ತಿ,
ಡೆಪ್ಯೂಟಿ ಕಮ್ಮಿಷನರ್.

---

## ಮೈಸೂರು ಡಿಸ್ಟ್ರಿಕ್ಟು.

### ಮೈಸೂರು ಡಿಸ್ಟ್ರಿಕ್ಟು ಜಡ್ಜ್‌ರಯವರ ಕೋರ್ಟಿನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 383.

ಮೃತಪಟ್ಟ ವೆಂಕಟರಾಜೇಅರಸಿನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ನಂಜಪ್ಪ; ದೇವರಾಜಯ್ಯ, ಮೃತಪಟ್ಟ ಸದರೀ ವೆಂಕಟರಾಜೇಅರಸಿನವರಿಗೆ ತಮ್ಮ, ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಸ್ಥಳದ ಸದರೀ ನಂಜಪ್ಪ, ದೇವರಾಜಯ್ಯ ಸಹ ಸದರೀ ವಾಸಸ್ಥರಾಗಿ ಮೃತಪಟ್ಟ ವೆಂಕಟರಾಜೇಅರಸಿನವರ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವೀ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾರೆ.

ಸದರೀ ದರಖಾಸ್ತುದಾರರಾದ ನಂಜಪ್ಪ, ದೇವರಾಜಯ್ಯ, ಇವರುಗಳ ಅರ್ಜಿಯನ್ನು 1884ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟರಾಜೇಅರಸಿನವರ ಆಸ್ತಿಗೆ ಹಕ್ಕುದಾರರಾದ ವಿಸಿಸ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

---

1884ನೇ ಇಸವಿ ಅರ್ಜೀ ನಂಬರ್ 308.

ಮೃತಪಟ್ಟ ಮರಿಯಂಣ ವುರಫ್ ಪುಟ್ಟಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಮಲ್ಲಯ್ಯ ಮೈನರ್, ಗಾರ್ಡಿಯರ್ ಮತ್ತು ಜನಕ ತಂದೆ ಕಂಠೀಲಿಂಗಂಣ, ಮೃತಪಟ್ಟ ಸದರೀ ಮರಿಯಂಣ ವುರಫ್ ಪುಟ್ಟಯ್ಯನಿಗೆ ದತ್ತುಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಸ್ಥಳದ ಸದರೀ ಪುಲ್ಲಯ್ಯ ಮೈನರ್, ಗಾರ್ಡಿಯರ್ ಮತ್ತು ಜನಕ ತಂದೆ ಕಂಠೀಲಿಂಗಂಣನು, ಸದರೀ ವಾಸಸ್ಥನಾಗಿ ಮೃತಪಟ್ಟ ಮರಿಯಂಣ ವುರಫ್ ಪುಟ್ಟಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ 800 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಮಲ್ಲಯ್ಯ ಮೈನರ್, ಗಾರ್ಡಿಯರ್ ಮತ್ತು ಜನಕ ತಂದೆ ಕಂಠೀಲಿಂಗಂಣನ ಅರ್ಜೀಯನ್ನು 1884ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮರಿಯಂಣ ವುರಫ್ ಪುಟ್ಟಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಸ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅಕ್ಟೋಬರ್ 9ನೇ ತಾರೀಖಿನಲ್ಲಿ ಕೋರ್ಟು ಮೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ವಿ. ಎಸ್. ನರಸಿಹ್ಮಯ್ಯಂಗಾರ್,
ಡಿಸ್ಟ್ರಿಕ್ಟು ಜಡ್ಜ್.

---

## ಕಡೂರು ಡಿಸ್ಟ್ರಿಕ್ಟು.

ತಾರೀಖು 28ನೇ ಸೆಪ್ಟಂಬರ್ 1884.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಚಿಕ್ಕಮಗಳೂರು ತಾಲ್ಲೂಕು ಮುಗಳವಳ್ಳಿ ಗ್ರಾಮದಲ್ಲಿರುವ ಮೂಲಿಮನೆ ನಂಜಪ್ಪಶಟ್ಟಿ ಮನೆಗೆ ಮಾಹೆ ಮಜಕೂರ್ ತಾರೀಖು 19ನೇ ರಾತ್ರಿ ಕನ್ನಹಾಕಿ ಷುಮಾರು 2,044—8—0 ಮಾಲು ಕಳ್ಳವು ಮಾಡಿಕೊಂಡು ಹೋದ ಕಳ್ಳರ ದಸ್ತಗಿರಿ ಬಗ್ಯೆ ತಕ್ಕ ಬಾತ್ಮಿ ತಿಳಿಸತಕ್ಕವರಿಗೆ ಕುಂಪಣಿ 100 ರೂಪಾಯಿ ಇನಾಂ ಕೊಡಲ್ಪಟ್ಟೀತು. ಕಳವು ಆದ ಜಿಂದಗೀ ತಪಸೀಲನ್ನು ಯಿದರಡಿ ನಮೂದಿಸಿಯಿದೆ :—